International Journal of Applied Research 2021; 7(11): 21-24




**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2021; 7(11): 21-24
www.allresearchjournal.com
Received: 21-08-2021
Accepted: 27-09-2021

**ಲೋಹಿತ್.ಪಿ.**
ಕನ್ನಡದ ಸಹ ಪ್ರಾಧ್ಯಾಪಕರು,
ಕ್ಯಾರೆಕ್ಟರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್,
ಶಿವಮೊಗ್ಗ, ಕರ್ನಾಟಕ, ಭಾರತ

**Corresponding Author:**
**ಲೋಹಿತ್.ಪಿ.**
ಕನ್ನಡದ ಸಹ ಪ್ರಾಧ್ಯಾಪಕರು,
ಕ್ಯಾರೆಕ್ಟರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್,
ಶಿವಮೊಗ್ಗ, ಕರ್ನಾಟಕ, ಭಾರತ

# ಹನ್ನೆರಡನೆ ಶತಮಾನದಲ್ಲಿ ವಚನ ಚಳುವಳಿ ಮತ್ತು ಸಾಮಾಜಿಕ ಹಿನ್ನೆಲೆ

**ಲೋಹಿತ್.ಪಿ**

## ಪರಿಚಯ

ಹನ್ನೆರಡನೆಯ ಶತಮಾನದಲ್ಲಿ ಉತ್ತರ ಕರ್ನಾಟಕದ ಕಲ್ಯಾಣದಲ್ಲಿ ಕರ್ನಾಟಕದ ಬೇರೆ ಬೇರೆಯ ಕಡೆಯಿಂದ ಬಂದಿದ್ದ ಶರಣರೆಲ್ಲ ಒಂದೆಡೆ ಸೇರಿದರು. ನೂರಾರು ಒಂದೇ ಕಾಲಕ್ಕೆ ಒಂದೇ ಎಡೆಯಲ್ಲಿ ಹೇಗೆ ಸೇರಿದ್ದರೂ ಅದು ಬಿಡಿಸಲಾರದ ಒಗಟು. ಬಹುಶಃ ಹನ್ನೆರಡನೆಯ ಶತಮಾನಕ್ಕೆ ಕಲ್ಯಾಣ ಕರ್ನಾಟಕದಲ್ಲೇ ಸುಪ್ರಸಿದ್ಧ ನಗರವೆನಿಸಿತ್ತೆಂದು ಶಾಸನಗಳು ತಿಳಿಸುತ್ತವೆ. ಹೀಗಾಗಿ ಕರ್ನಾಟಕದ ಬುದ್ಧಿಜೀವಿಗಳು ಶರಣರೆನಿಸಿಕೊಂಡವರು. ವಿದ್ಯೆ ಮತ್ತು ನಾಗರೀಕತೆಗಳು ನೆಲೆಸಿದ್ದ ನಗರಕ್ಕೆ ವಲಸೆ ಹೋಗುತ್ತಿದ್ದುದು ಸಹಜವಾಗಿಯೇ ಇದ್ದಿತು. ಬಸವಣ್ಣನವರೂ ಸಹ ಕೂಡಲಸಂಗಮದಲ್ಲಿ ವಿದ್ಯಾಭ್ಯಾಸವಾದ ಮೇಲೆ ಉದ್ಯೋಗಾರ್ಥಿಯಾಗಿ ಕಲ್ಯಾಣದ ಕಡೆಗೆ ನಡೆದಿದ್ದಿರಬೇಕು. ಆಗ ಕಲ್ಯಾಣವನ್ನಾಳುತ್ತಿದ್ದ ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರು ಸ್ವಲ್ಪಕಾಲ ಮಂತ್ರಿಯಾಗಿದ್ದಂತೆ ಐತಿಹಾಸಿಕ ಸಂಗತಿಗಳು ಹೇಳುತ್ತವೆ. ಆದರೆ ವಿಧ್ಯಾಭ್ಯಾಸದ ಕಾಲಕ್ಕೆ ಸಾಮಾಜಿಕ ಚಿಂತನೆ, ಸಾಮಾನ್ಯರ ಉದ್ಧಾರ ಮತ್ತು ಶೋಷಣೆಯ ವಿರುದ್ಧ ಇದ್ದ ಬಸವಣ್ಣನವರು ಬಿಜ್ಜಳನ ಆಸ್ಥಾನ ಬಿಟ್ಟು ಕಲ್ಯಾಣದ ಹೊರಗೆ ಬಂದು ಅನುಭವ ಮಂಟಪ ಕಟ್ಟಿದರು. ಅಷ್ಟು ಹೊತ್ತಿಗಾಗಲೇ ಶರಣರ ಸಮೂಹ ಕಲ್ಯಾಣದಲ್ಲಿ ಸೇರಿದ್ದಿತು ಎಂದು ಕಾಣುತ್ತದೆ. ಅಥವಾ ಬಸವಣ್ಣನಂಥ ಒಬ್ಬ ವಿದ್ಯಾ ಪಕ್ಷಪಾತಿ ಮಹಾಶರನ ಮಂತ್ರಿಯಾಗಿರುವುದನ್ನು ಕೇಳಿಯೇ ಅನೇಕ ಸಜ್ಜನರು ಆಕರ್ಷಿತರಾಗಿ ಕಲ್ಯಾಣದತ್ತ ನಡೆದಿರಬೇಕು. ಬಸವಣ್ಣನವರಿಗೆ ಬಿಜ್ಜಳನ ಸಂಗಕ್ಕಿಂತ ಅರಮನೆಯ ಬಂಡಾರಕ್ಕಿಂತ ಶರಣರ ಸತ್ಸಂಗವೇ ಸಾಮಾನ್ಯ ಬಗೆಯ ಜೀವನವೇ ಸುಖದಾಯಕ. ಅದೇ ಸಾದನೆಯ ಮಾರ್ಗ ಎಂಬುದು ಅನುಭವದಿಂದಲೇ ತಿಳಿದುಬಂದಿರಬೇಕು. ಅರಮನೆಯ ನಾಯಕರು ಇರುವುದು ತಮ್ಮ ವೈಭವಕ್ಕೆ ಇಲ್ಲವೇ ಯುದ್ಧಕ್ಕೆ. ಇವಿಷ್ಟನ್ನು ಬಿಟ್ಟು ಮೂರನೆಯ ಚಿಂತನೆಯೇ ಆವರಿಸಿಲ್ಲ ಅನಿಸಿರಬೇಕು. ಬಸವಣ್ಣನವರು ಬಿಜ್ಜಳನ ವಿರುದ್ಧ ತಿರುತಿ ಬಿದ್ದರು. ಬಿಜ್ಜಳನ ಎದುರು ನಿಲ್ಲುವುದಕ್ಕೆ ಮುನ್ನವೇ ತಮ್ಮ ಯೌವನಪೂರ್ವದಲ್ಲಿ ಹುಟ್ಟಿದ ಅಗ್ರಹಾರದಲ್ಲಿಯೇ ಸಂಪ್ರದಾಯಸ್ಥರ ವಿರುದ್ಧ ತಿರುಗಿ ಬಿದ್ದು ಜನಿವಾರ ಕಿತ್ತು ಬಿಸುಟು ಕೂಡಲಸಂಗಮಕ್ಕೆ ನಡೆದು ಅಲ್ಲಿ ವಿದ್ಯೆಯನ್ನು ಭಕ್ತಿಯನ್ನು ಸಾಧಿಸಿದ್ದರು. ಹಾಗೆ ಸಾಧಿಸಿದ್ದ ಪೂರ್ಣ ವಿದ್ಯೆ ಮತ್ತು ಭಕ್ತಿ ಅಧಿಕಾರಶಾಹಿಯ ಮುಂದೆ ಪ್ರಯೋಜನಕ್ಕೆ ಬರಲಿಲ್ಲ.

ಬಸವಣ್ಣನವರು ಜನಸಾಮಾನ್ಯರನ್ನು ಕುರಿತು ಹೇಗೆ ಆಲೋಚಿಸಿದ್ದರೋ ಅದನ್ನು ಪ್ರಯೋಗಿಸಿಯೇ ತೀರಬೇಕೆಂದು ಅಂದು ಕೊಂಡಿದ್ದವರು. ಜನಸಮೂಹಕ್ಕೆ ಮೊದಲು ಭಕ್ತಿಯನ್ನು ಬೋಧಿಸುವುದರ ಬದಲು ಬಸವಣ್ಣನವರು ಕಾಯಕ ತತ್ವವನ್ನು ಹೇಳಿಕೊಟ್ಟರು. ಬದುಕಿಗೆ ಕಾಯಕ ಬಹುಮುಖ್ಯವಾದುದು. ಆ ಕಾಯಕದ ಜತೆಗೇ ಭಕಿಯಿರಬೇಕು. ಜಾತಿಯೆಂಬುದು ಇಲ್ಲ. ಆದರೆ ಕಾಯಕದಲ್ಲಿ ಬೇರೆ ಬೇರೆ ಬಗೆಗಳಿವೆ. ಅದರಲ್ಲಿ ಮೇಲು ಕೀಳು ಎಂಬುದಿಲ್ಲ. ಮೇಳು ಕೀಳು ಹೇಳೂವ ಜಾತಿಯನ್ನು ಬಿಟ್ಟು ಅದರ ಅರಿವಿಲ್ಲದೆ ಎಲ್ಲ ಶಿವಶರಣರನ್ನು ಅವರವರ ಕಾಯಕದೊಂದಿಗೆ ಗುರುತಿಸಿದರು. ಚೌಡಯ್ಯ ಅಂಬಿಗರವನು. ಮಂಚಯ್ಯ ಮಡಿವಾಳರವ. ಮಾರಿತಂದೆ ಹೆಂಡ ಮಾರುತ್ತಿದ್ದವನು. ಬೊಮ್ಮಯ್ಯನಿಗೆ ಕಿನ್ನರಿ ನುಡಿಸುವುದು ಬರುತಿತ್ತು. ಚನ್ನಯ್ಯ ಮಾದಾರ ಕುಲದಿಂದ ಬಂದವನು. ಬಸವಣ್ಣನವರಾದರೂ ತಾವು ಈ ಮಾದಾರ ಕುಲದ ಚನ್ನಯ್ಯನಿಂದಲೇ ತಾವು ಹುಟ್ಟಿದ್ದು ಎಂದು ಹೇಳಿಕೊಳ್ಳುವ ಹಂತಕ್ಕೆ ತಲುಪಿದ್ದರು. ಅನುಭವ ಮಂಟಪದಲ್ಲಿ ಕಾಯಕ ಮುಖ್ಯವೇ ಹೊರತು ಜಾತಿ ಮುಖ್ಯವಲ್ಲ ಎಂಬುದನ್ನು ಹೇಳಲೆಂದೇ ಬಸವಣ್ಣ ಪ್ರತಿಯೊಬ್ಬರನ್ನೂ ಕಾಯಕದ ಮುಂದೆಯೇ ಗುರುತಿಸುತ್ತಾರೆ. ಇವಿಷ್ಟೇ ಬಸವಣ್ಣನವರ ಸಾಧನೆ ಆಗಿದ್ದರೆ ಬಹುಶಃ ಕಲ್ಯಾಣದಲ್ಲಿ ಕ್ರಂತಿ ಆಗುತ್ತಿರಲಿಲ್ಲ. ಬಸವಣ್ಣ ಇನ್ನು ಒಂದು ಹೆಜ್ಜೆ ಮುಂದುವರೆದು ಅಂತರ್ಜಾತಿಯ ವಿವಾಹವನ್ನು ಜಾರಿಗೆ ತರಲು ಪ್ರಯತ್ನಿಸಿದರು. ನುಡಿದಂತೆ

ನಡೆಯುವುದು, ಜಾತಿಯಲ್ಲ ಎನ್ನುವುದೇ ಆದರೆ ಅನುಭವ ಮಂಟಪದಲ್ಲಿ ಎರಡು ಜಾತಿಯ ಹೆಣ್ಣು ಗಂಡನ್ನು ಒಂದುಗೂಡಿಸಿ ವಿವಾಹ ನೆರವೇರಿಸುವುದು ಬಸವಣ್ಣನ ಧ್ಯೇಯವಾಯಿತು. ಬ್ರಾಹ್ಮಣರ ಹುಡುಗಿಯನ್ನು ಕೆಳವರ್ಗದ ಹುಡುಗನೊಂದಿಗೆ ಲಗ್ನಕ್ಕೆ ನಿಲ್ಲಿಸಿದ್ದು ಆಕಾಲಕ್ಕೆ ಕ್ರಾಂತಿಯ ತುದಿ ಮುಟ್ಟುವ ಸಂಗತಿಯಾಯಿತು. ಆಗ ಜಾತಿವಾದಿಗಳು ಮೂಲಭೂತವಾದಿ ಸಂಪ್ರದಾಯಸ್ಥರು ಜಾಗೃತರಾದರು. ಬಸವಣ್ಣನವರು ಕ್ರಾಂತಿ ಮತ್ತು ಸಾಮಾಜಿಕ ಚಳುವಳಿಯ ಹಿನ್ನೆಲೆಯಲ್ಲಿ ನಡೆಸುತ್ತಿರುವುದೆಲ್ಲ ಅಪಾಯಕಾರಿ ಘಟನೆಯಾಇ ಕಂಡುಬಿಟ್ಟಿತು. ಈ ಬಗೆಯ ಜಾತಿ ರಹಿತ ಚಿಂತನೆಯ ಸಮೂಹ ಕಲ್ಯಾಣದಲ್ಲಿರಲೇ ಬಾರದೆಂಬುದು ಅಧಿಕಾರ ಶಾಹಿಯ ಆತಂಕದ ಆಲೋಚನೆಯಾಯಿತು. ಶರಣರ ಕ್ರಾಂತಿಕಾರಕ ಆಲೋಚನೆಗಳನ್ನು ಸಂಪೂರ್ಣ ಹತ್ತಿಕ್ಕಲು ಬಿಜ್ಜಳನು ತೊಡಗಿದ್ದೇ ಕಲ್ಯಾಣದಲ್ಲಿ ನೆರೆದಿದ್ದ ಶಿವಶರಣರೆಲ್ಲ ಚದುರಿದರು. ಈ ಘರ್ಷಣೆಯಲ್ಲಿ ಲಕ್ಷ ಜನ ಶಿವಶರಣರು ಹತರಾದರು. ಚನ್ನಬಸವಣ್ಣನವರು ಉಳವಿಯ ಕಡೆ, ಅಕ್ಕಮಹಾದೇವಿ ಶ್ರೀಶೈಲದ ಕದಳಿಗೆ, ಬಸವಣ್ಣನವರು ಕೂಡಲ ಸಂಗಮಕ್ಕೆ ನಡೆದರು. ಬಹುಶಃ ಬಸವಣ್ಣನವರು ತಮ್ಮ ಜೀವನಾಂತ್ಯದಲ್ಲಿಯೂ ತಾವು ಹುಟ್ಟಿದ ನೆಲೆಯನ್ನು ತಲುಪಲಾಗಲಿಲ್ಲ. ಅವರು ಹುಟ್ಟಿಬೆಳೆದ ಅಗ್ರಹಾರ ಅವರಿಗೆ ಪ್ರಿಯವಾದ ಸ್ಥಳವೇನೂ ಆಗಿರಲಿಲ್ಲ. ಹಾಗಾಗಿ ಅವರು ತಾವು ವಿದ್ಯಾಭ್ಯಾಸಗೈದ ಸ್ಥಳದಲ್ಲೇ ತಮ್ಮ ಜೀವನದ ಕೊನೆಯ ದಿನಗಳನ್ನು ಕಾಣುವಂತಾಯಿತು. ಕರ್ನಾಟಕ ಎಂದೂ ಕಂಡರಿಯದ ಒಂದು ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಆಂದೋಲನವು ಹನ್ನೆರಡನೆಯ ಶತಮಾನದಲ್ಲಿ ಜರುಗಿಹೋಯಿತು. ಮೇಲ್ವರ್ಗದಲ್ಲಿ ಹುಟ್ಟಿಬಂದ ಬಸವಣ್ಣ ಕೆಳವರ್ಗದಿಂದ ಬಂದ ಅಲ್ಲಮಪ್ರಭುವನ್ನು ತಾನು ಸ್ಥಾಪಿಸಿದ ಶೂನ್ಯ ಸಿಂಹಾಸನಕ್ಕೆ ಅಧ್ಯಕ್ಷನನ್ನಾಗಿ ಮಾಡಿದರು. ನಾಡಿನ ಎಲ್ಲ ವರ್ಗದಿಂದಲೂ ಬಂದ ಶ್ರೀಸಾಮಾನ್ಯರು ಅನುಭವ ಮಂಟಪದಲ್ಲಿ ಶಿಕ್ಷಣವನ್ನು ಪಡೆದರು. ತಂತಮ್ಮ ಕಾಯಕದ ಹಿನ್ನೆಲೆಯಲ್ಲಿಯೂ ವಚನರಚನೆ ಮಾಡಿದರು. ಮೊದಲಬಾರಿಗೆ ಹೆಂಗಸರೂ ಸಹ ಅದರಲ್ಲೂ ಯಾರನ್ನು ಸಮಾಜ ನಿಕೃಷ್ಟರೆಂದು ಹೆಸರಿಸಿತ್ತೋ ಅಂಥ ವೇಶ್ಯೆಯರನ್ನು ಸಹ ಬಸವಣ್ಣನವರು ಅನುಭವಮಂಟಪಕ್ಕೆ ಕರೆತಂದರು. ಇಂಥವರನ್ನೆಲ್ಲ ಬಸವಣ್ಣನವರು ತನ್ನತಂದೆ ತಾಯಿ ಬಂಧುಬಳಗ ಎಂದು ಕರೆದುಕೊಂಡಿದ್ದು ಅವರ ಸಾಮಾಜಿಕವಾಗಿ ಇಟ್ಟ ಬಹು ದೊಡ್ಡ ಹೆಜ್ಜೆ. ಆ ಮುಂದೆಯೂ ಕರ್ನಾಟಕದಲ್ಲಿ ಇಂಥದೊಂದು ಕ್ರಾಂತಿ ಕರ್ನಾಟಕದಲ್ಲಿ ನಡೆಯಲಿಲ್ಲ. ವಚನಕಾರರ ಆಂದೋಲನ ಬಸವಕಲ್ಯಾಣದಲಿ ಕೆಲವೇ ವರ್ಷಗಳಲ್ಲಿ ನಡೆದರೂ ಆ ಕ್ರಾಂತಿಯ ಬೀಜ ಮಾತ್ರ ಭೂಮಿಯಲ್ಲಿ ಮೊಳೆಯುತಲೇ ಇದ್ದು ಮತ್ತೆ ಹದಿನೈದನೇ ಶತಮಾನದ ಹೊತ್ತಿಗೆ ತನ್ನ ಫಲವನ್ನು ಕೊಟ್ಟಿತು. ಅದು ಮತ್ತೆ ಕರ್ನಾಟಕದಾದ್ಯಂತ ತನ್ನ ರೆಂಬೆ ಕೊಂಬೆಗಳನ್ನು ಚಾಚಿದಂತೆ ಕಾಣುತ್ತದೆ.

ಹದಿನೈದನೇ ಶತಮಾನದ ಹೊತ್ತಿಗೆ ಕಲ್ಯಾಣದಿಂದ ಅಳಿದುಳಿದ ಶರಣರು ಮಧ್ಯಕರ್ನಾಟಕ, ದಕ್ಷಿಣ ಕರ್ನಾಟಕದ ಕಡೆ ಹೊರಟರು. ಅವರು ಕಟ್ಟಬಯಸಿದ್ದು ವಚನಕಾರರು ಕಟ್ಟಬೇಕೆಂದಿದ್ದ ಸಮಾಜವನ್ನೇ, ಈ ಶರಣರೆಲ್ಲ ಸ್ಥಾವರ ಸಂಸ್ಕೃತಿಯ ವಿರುದ್ಧವೇ ಇದ್ದರು. ಜಾತಿ ನಾಶದ ಕಡೆಗೆ ಇದ್ದರು. ಯುದ್ಧವಿರೋಧಿ ತತ್ವದವರಾಗಿದ್ದರು. ಹೀಗಾಗಿ ಹನ್ನೆರಡನೇ ಶತಮಾನದಲ್ಲಿ ಹುಟ್ಟುಹಾಕಿದ ಚಳುವಳಿ ಸ್ವಲ್ಪ ಕಾಲ ಸ್ಥಗಿತಗೊಂದಂತೆ ಕಂಡರೂ ಅದು ತನ್ನೆಲ್ಲ ಧ್ಯೇಯೋದ್ದೇಶಗಳೊಡನೆ ಹದಿನೈದನೇ ಶತಮಾನದ ನಂತರ ಮುಂದುವರೆಯಿತು. ಮಧ್ಯಕರ್ನಾಟಕದಲ್ಲಿ ಶರಣ ತಿಪ್ಪೇಸ್ವಾಮಿ ದಕ್ಷಿಣ ಕರ್ನಾಟಕದಲ್ಲಿ ಮಲೆ ಮಹದೇಶವರ, ಮಂಟೇಸ್ವಾಮಿ, ಸಿದ್ಧಪಾಜಿ, ರಚಪ್ಪಾಜಿ ಮುಂತಾದವರು ಕಾಣಿಸಿಕೊಂಡರು. ಅವರು ಐಕ್ಯಗೊಂಡ ಸ್ಥಳಗಳಲ್ಲಿ ಇಂದು ಯಾವುದೇ ಗುಡಿಗುಂಡಾರಗಳು ನಿರ್ಮಾಣವಾಗದಿದ್ದರೂ ಲಕ್ಷಾಂತರ ಭಕ್ತ ಸಮೂಹವೂ ಇಂದು ಆಯಾ ಸಂತರ ಹೆಸರಿನಲ್ಲಿ ಒಂದು ದೊಡ್ಡ ಸಾಂಪ್ರದಾಯಿಕ ಪರಂಪರೆಯನ್ನೇ ಸೃಷ್ಟಿಸಿದ್ದಾರೆ. ಎಲ್ಲಾ ಕೆಳವರ್ಗಗಳವರೂ ಈ ಶರಣರ ಹೆಸರಿನಲ್ಲಿ ದೀಕ್ಷೆ ಪಡೆದವರಾಗಿರುತ್ತಾರೆ. ಮಹದೇಶ್ವರ, ಮಂಟೇಸ್ವಾಮಿಯವರ ಮೇಲೆ ಜನಪದ ಮಹಾಕಾವ್ಯಗಳು ಸೃಷ್ಟಿಯಾಗಿರುತ್ತವೆ. ಆ ಮಹಾಕಾವ್ಯಗಳು ಆಡು ಮಾತಿನಲ್ಲಿಯೇ ಇರುತ್ತವೆ.

ಹನ್ನೆರಡನೇ ಶತಮಾನದ ವಚನ ಕ್ರಾಂತಿ ಸಂಪೂರ್ಣ ಸಾಮಾಜಿಕ ಹಿನ್ನಲೆಯಲ್ಲೇ ಹುಟ್ಟಿಕೊಂಡರೆ ಹದಿನೈದನೇ ಶತಮಾನದ ನಂತರ ಅದೇ ಇನ್ನೊಂದು ದಿಕ್ಕಿನಲ್ಲಿ ಭಾಗವತ ಧರ್ಮ ಪುನರುಜ್ಜೀವನ ಪಡೆಯಿತು. ಇದು ಒಂದು ಬಗೆಯಲ್ಲಿ ಸಾಮಾಜಿಕ ಸ್ಥಿತಿ ಗತಿಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡರೂ ವಚನ ಕ್ರಾಂತಿಯ ತೀವ್ರತೆ ಇದಕ್ಕಿರಲಿಲ್ಲ. ಈ ಕಾರಣಕ್ಕೆ ಕೀರ್ತನಕಾರರು ಮತ್ತು ಅವರ ಸೌಮ್ಯಬಗೆಯ ಚಳುವಳಿಯ ಕರ್ನಾಟಕದಲ್ಲಿ ಬಹುಕಾಲ ಮುಂದುವರೆಯಿತು. ಪಂಪನ ಸಮಕಾಲೀನ ಕವಿಗಳು ಆಸ್ಥಾನ ಪರಂಪರೆಯ ಸಾಹಿತ್ಯ ರಚನೆಯಾದರೆ, ಹರಿಹರ ರಾಘವಾಂಕರ ಕೃತಿರಚನೆ ಶರಣ ಪರಂಪರೆಯ ಹಿನ್ನೆಲೆಯಲ್ಲಾಯಿತು. ವಚನಕಾರರು ಮತ್ತು ಶರಣ ಪರಂಪರೆಯ ನಂತರ ಕನ್ನಡ ಸಾಹಿತ್ಯ ಪಡೆದುಕೊಂಡ ಮುಖ್ಯ ತಿರುವು ಎಂದರೆ ವೈಷ್ಣವ ಧರ್ಮದ ಹಿನ್ನೆಲೆಯಲ್ಲಿ ಕೀರ್ತನಕಾರರು ಬಂದದ್ದು. ವಚನಕಾರರಂತೆ ಇವರಿಗೂ ಸಮಾಜದ ಏಳಿಗೆಯೇ ಮುಖ್ಯ ಧ್ಯೇಯೋದ್ದೇಶವಾಗಿದ್ದಿತು. ಆದರೆ ಶರನರಂತೆ ಇವರು ಪ್ರಯೋಗ ಪರೀಕ್ಷೆಗಳಿಗೆ ಕೈ ಹಾಕಲಿಲ್ಲ. ಇಷ್ಟಾಗಿ ಕೀರ್ತನಕಾರರು ವಚನಕಾರರಂತೆ ಜಂಗಮ ತತ್ವವನ್ನೇ ಅನುಸರಿಸುತ್ತ ಸ್ಥಳದಿಂದ ಸ್ಥಳಕ್ಕೆ ಚಲಿಸುತ್ತ ಜನಜೀವನ ಹಸನಾಗಲು ಬೇಕಾದ ತತ್ವಗಳನ್ನು ಹರಡಿದರು. ಆ ತತ್ವಗಳು ತಾಳ ತಂಬೂರಿಗಳ ಹಿನ್ನೆಲೆಯಲ್ಲಿ ಕೇಳುಗರ ಕವಿಗೆ ಇಂಪಾಗುವಂತೆ ಹಾಡಿ ತೋರಿಸುತ್ತಿದ್ದರು. ಹೀಗಾಗಿ ವಚನಗಳಲ್ಲಿ ಇದ್ದ ತೀವ್ರತೆ ದಾಸವರೇಣ್ಯರ ಕೀರ್ತನೆಗಳಲ್ಲಿ ಇರುತ್ತಿರಲಿಲ್ಲ. ಅಂತೂ ಅರಮನೆಯಲ್ಲಿ ಹುಟ್ಟಿದ ಕನ್ನಡಸಾಹಿತ್ಯ ಪರಂಪರೆ ಅದನ್ನು ಬಿಟ್ಟು ಹನ್ನೆರಡನೆಯ ಶತಮಾನದ ಹೊತ್ತಿಗೆ ಜನಸಾಮಾನ್ಯರ ಮುಂದೆ ಚಳುವಳಿಯ ಸ್ವರೂಪ ಪಡೆದು ಬಂದಿತು. ಉತ್ತರ ಕರ್ನಾಟಕದಲ್ಲಿ ಆರಂಭಗೊಂಡ ಚಳುವಳಿ ಹದಿನೈದನೇ ಶತಮನದ ಹೊತ್ತಿಗೆ ಕರ್ನಾಟಕದಾದ್ಯಂತ ಹಬ್ಬಿತು. ಈ ದಿಕ್ಕಿನಲ್ಲಿ ಕರ್ನಾಟಕದಲ್ಲಿ ಬಂದ ಬಹುಮುಖ್ಯ ಕೀರ್ತನಕಾರರು ಪುರಂಪರದಾಸರು ಮತ್ತು ಕನಕದಾಸರು. ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಕ್ರಾಂತಿಯ ಪರಿಣಾಮವಾಗಿಯೇ ಹದಿನೈದನೇ ಶತಮಾನದಲ್ಲಿ ಪುರಂದರದಾಸರಂಥ ಶ್ರೇಷ್ಠ ಕೀರ್ತನ ಕಾರರ ಜೊತೆಗೆ ಕೆಳವರ್ಗದಿಮ್ದ ಕನಕದಾಸರಂಥವರು ಬರಲು ಸಾಧ್ಯವಾಯಿತು. ವಚನಕಾರರ ಮತ್ತು ಕೀರ್ತನಕಾರರ ಚಳುವಳಿಗಳಿಗೆ ಅನೇಕ ಸಾಮ್ಯತೆಗಳಿವೆ. ಎರಡೂ ಪಂಥಗಳವರು ಸ್ಥಾವರ ತತ್ವವನ್ನು ಸಂಪೂರ್ಣ ವಿರೋಧಿಸಿದ್ದವರು. ಅಂದರೆ ಗುಡಿಗುಂಡಾರಗಳ ನಿರ್ಮಾಣಕ್ಕೆ ವಿರೋಧಿಗಳಾಗಿದ್ದರು. ಇದಕ್ಕೆ ಕಾರಣ ದೇವಾಲಯಗಳ ನಿರ್ಮಾಪಕರು ಬಹುತೇಕ ರಾಜರೇ ಆಗಿದ್ದರು. ಕಾವ್ಯಗಳಲ್ಲಿ ಬರುವ ಉದಾಹರಣೆಗಳಂತೆ ಅನೇಕ ರಾಜ ಮಹಾರಾಜರು ತಾವು ಯುದ್ಧಗಳಲ್ಲಿ ಜಯಗಳಿಸಿದ್ದನ್ನು ಆಚರಿಸಲು ದೇವಾಲಯಗಳನ್ನು ಕಟ್ಟಿಸುತ್ತಿದ್ದರು. ಒಬ್ಬ ರಾಜರು ಶತ್ರು ರಾಜನಿಂದ ಲೂಟಿ ಹೊಡೆದದ್ದರ ಪಾಪಪ್ರಜ್ಞೆ ಯಿಂದ ಪಾರಾಗುವುದಕ್ಕೆ ದೇವರು ಮತ್ತು ದೇವಾಲಯಗಳ ನಿರ್ಮಾಣಕ್ಕೆ ತೊಡಗುತ್ತಿದ್ದನು. ಈ ಸ್ಥಾವರ ಕಲ್ಪನೆ ರಾಜಮಹಾರಾಜರಿಗೆ ಸಂಬಂಧಪಟ್ಟಿದ್ದರಿಂದ ವಚನಕಾರರು ಈ ಸ್ಥಾವರ ನಿರ್ಮಾಣವನ್ನೆ ವಿರೋಧಿಸಿ ಮಾತನಾಡಿರುವಂತೆ ಕಾಣಿಸುತ್ತಾರೆ. ಬದಲಾಗಿ ಜಂಗಮ ಸಂಸ್ಕೃತಿಯನ್ನು ಎತ್ತಿಹಿಡಿದರು. ಅಂದರೆ ಶರಣರು ತಮ್ಮ ಆಡಳಿತ ಜ್ಞಾನವನ್ನು ಕಾಲ್ನಡಿಗೆಯ ಮೂಲಕ ಸಮಾಜಕ್ಕೆ ಹಂಚುತ್ತ ಹೋಗುವುದು. ತಾವು ಹಂಚುವ ಜ್ಞಾನಕ್ಕೆ

ಬದಲಾಗಿ ಭಕ್ತರಿಂದ ಅಥವಾ ಸಾಮಾಜಿಕರಿಂದ ಕೋರಣ್ಯವನ್ನು ಪಡೆಯುವುದು. ಕೋರಣ್ಯ ಪಡೆಯುತ್ತಲೇ ಜ್ಞಾನವನ್ನು ಹಂಚುತ್ತಲೇ ಊರಿಂದ ಊರಿಗೆ ಚಲಿಸುವುದು, ತನ್ಮೂಲಕ ಸಾಮಾನ್ಯರ ಕಷ್ಟನಿಷ್ಟಗಳನ್ನು ಅರಿಯುವುದು. ಅರಿತ ಕಷ್ಟನಷ್ಟಗಳಿಗೆ ಪರ್ಯಾಯವನ್ನು ಹುಡುಕುವುದು. ಆ ಪರ್ಯಾಯ ಮಾರ್ಗಗಳು ಸರಳ ತತ್ವಗಳೇ ಆಗಿರುತ್ತಿದ್ದವು. ಇದು ಶರಣರ, ಕೀರ್ತನಕಾರರ ಜಗತ್ತು. ಕಲ್ಯಾಣದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಕೂಡಿದ್ದು ತದನಂತರ ಹೊರಟ ನೆಲೆಗಳು ಕರ್ನಾಟಕದ ಬೇರೆ ಬೇರೆಯ ಭಾಗಗಳಲ್ಲಿವೆ ಎಂಬುದು ಗಮನಾರ್ಹ.

ಈ ಹಿಂದೆಯೇ ಹೇಳಿದಂತೆ ಅವು ಸಾಮಾನ್ಯ ಜನ ನಿರ್ಮಾಣ ಮಾಡಿದ ಸಾಮಾನ್ಯ ಬಗೆಯ ಮಂಟಪಗಳು. ರಾಜಮಹಾರಾಜರು ನಿರ್ಮಿಸಿದ ಕಲಾಮಂದಿರಗಳಲ್ಲ. ಆದರೂ ಕಾಲಕ್ರಮೇಣ ಹಲಕೆಲವು ಶರಣರ ನೆನಪಿನಲ್ಲಿ ಆಧುನಿಕ ರೀತಿಯಲ್ಲಿ ಗುಡಿಗಳು ನಿರ್ಮಾಣವಾಗಿರುವುದೂ ಉಂಟು. ಬಸವಣ್ಣನವರ ಹೆಸರಿನಲ್ಲಿ ಕಲ್ಯಾಣದಲ್ಲಿ ಇತ್ತೀಚೆಗೆ ದೇವಾಲಯ ನಿರ್ಮಾಣವಾಗಿರುವಷ್ಟೆ ಮಲೆಯಮಹದೇಶ್ವರ, ಮಂಟೇಸ್ವಾಮಿ ಇವರ ನೆನಪಿನಲ್ಲಿ ಸಾಮಾನ್ಯ ಪ್ರಮಾಣದ ಮಂದಿರಗಳು ನಿರ್ಮಾಣವಾಗಿವೆ. ಉಳವಿಯಲ್ಲಿ ಚನ್ನಬಸವಣ್ಣ, ಸೊನ್ನಲಿಗೆಯಲ್ಲಿ ಸಿದ್ಧರಾಮ, ಇವರ ಹೆಸರಿನಲ್ಲೂ ದೇವಾಲಯಗಳು ಕಳೆದ ಶತಮಾನಗಳಲ್ಲಿ ಆದಂತೆ ಕಾಣಿಸುತ್ತದೆ. ಹಾಗೆಯೇ ಕೀರ್ತನಕಾರ ರಾಘವೇಂದ್ರ ಸ್ವಾಮಿಗಳವರ ಹೆಸರಿನಲ್ಲಿ ಮಂತ್ರಾಲಯದಲ್ಲಿ ಬೃದಂದಾವನವೊಂದು ನಿರ್ಮಾಣಗೊಂಡಿದೆ. ಆದರೆ ಪುರಂದರ, ಕನಕರ ಹೆಸರಿನಲ್ಲಿ ಗುಡಿಗಳು ನಿರ್ಮಾಣವಾಗಿಲ್ಲ. ಅವರ ಐಕ್ಯಸ್ಥಳಗಳು ಯಾವುವು ಎಂಬುದೂ ತಿಳಿಯುವುದಿಲ್ಲ. ಆದರೆ ಅವರು ಸಮಾಜೋದ್ದಾರಕ್ಕಾಗಿ ಶ್ರಮಿಸಿದ್ದು, ಆ ಹಿನ್ನೆಲೆಯಲ್ಲಿ ಅವರು ರಚಿಸಿದ ಅಸಂಖ್ಯಾತ ಕೀರ್ತನೆಗಳು ನಮ್ಮ ಕಣ್ಣ ಮುಂದಿವೆ. ಆದರೆ ಕಲ್ಯಾಣ ಕ್ರಾಂತಿಯ ನಂತರ ಬಂದ ಶರಣರು ಅಕ್ಷರ ಸಂಸ್ಕೃತಿಗೆ ಹೋಗಲೇ ಇಲ್ಲ. ಮಹದೇಶವರ, ಮಂಟೇಸ್ವಾಮಿ, ತಿಪ್ಪೇಸ್ವಾಮಿ ಇವರು ಸ್ವತಃ ಏನನ್ನು ರಚಿಸಿದಂತೆ ಕಾಣುವುದಿಲ್ಲ. ಇವರು ಅಕ್ಷರ ಸಂಗತಿಯನ್ನೂ ಕೈಬಿಟ್ಟು ಸಂಪೂರ್ಣ ಜಂಗಮರಾಗಿಯೇ ಗ್ರಾಮೀಣ ಜನರ ನಡುವೆ ಕರಾಣ್ಯದ ಜೀವನ ನಡೆಸಿರುವಂತೆ ತಿಳಿದುಬರುತ್ತದೆ. ಆದರಿಂದ ಅವರು ನಡೆದಾಡಿದ ಸ್ಥಳಗಳಲ್ಲೆಲ್ಲ ಗದ್ದುಗೆಗಳಿವೆ. ಆ ಗದ್ದುಗೆಗಳಲ್ಲಿಯೂ ಅವರ ಪ್ರತಿರೂಪ ವಿಗ್ರಹಗಳಿಲ್ಲ. ಅವರು ಹಿಡಿದ ದಂಡ ಇಲ್ಲವೇ ತ್ರಿಶೂಲದ ಸಂಕೇತಗಳಿರುತ್ತವೆ. ಈ ಗದ್ದುಗೆಗಳಿಗೆ ಈ ಹಿಂದೆಯೇ ಹೇಳಿದಂತೆ ಅಸಂಖ್ಯಾತ ಭಕ್ತರು ಒಂದು ಮೌಖಿಕ ಪರಂಪರೆಯನ್ನು ಸೃಷ್ಟಿಸಿದ್ದಾರೆ. ಮಹದೇಶ್ವರ, ಮಂಟೇಸ್ವಾಮಿಯವರನ್ನು ಕುರಿತು ಅಸಂಖ್ಯಾತ ದಂತಕಥೆಗಳು, ಕಾವ್ಯಭಾಗಗಳು ಸೃಷ್ಟಿಯಾಗಿವೆ. ಆದರೆ ವಚನ ಮತ್ತು ಕೀರ್ತನೆಗಳನ್ನು ಹಾಡಿದವರ ಮೇಲೆ ಜನಪದರು ಕಾವ್ಯಕಥೆಗಳನ್ನು ಕಟ್ಟಿಲ್ಲ. ಅಂದರೆ ಶಿಷ್ಯರವತ್ತಿನ ಬಸವಣ್ಣ, ಅಲ್ಲಮ, ಪುರಂದರ, ಕನಕರಿಗಿಂತ, ಮಹದೇಶ್ವರ, ಮಂಟೇಸ್ವಾಮಿಗಳು ಹೆಚ್ಚು ಜಂಗಮ ಸ್ವರೂಪಿಗಳಾಗಿರಬೇಕು. ಇದು ಅಕ್ಷರ ಸ್ಂಸ್ಕೃತಿಗಿಂತ ಒಂದು ಹೆಜ್ಜೆ ಮುಂದೆ ಇದ್ದಿರಬೇಕು. ಇದು ಕನ್ನಡ ಸಾಂಸ್ಕೃತಿಕ ಪರಂಪರೆಯಲ್ಲಿ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಾದ ಸಂಗತಿಗಳು. ಇಷ್ಟಾಗಿ ಕೀರ್ತನಕಾರರ, ವಚನಕಾರರ ಸಾಹಿತ್ಯ ಮತ್ತು ಬದುಕಿನ ಸಂಗತಿಗಳು ವಿದ್ವಾಂಸರ ನಡುವೆ ಚರ್ಚಿತವಾದಂತೆ ಜನಪದ ಲೋಕದ ಶರಣರು ಮಹದೇಶ್ವರ, ಮಂಟೇಸ್ವಾಮಿ, ಸಿದ್ಧಪ್ಪಜಿಗಳನ್ನು ಕುರಿತು ಚರ್ಚೆನಡೆದಿರುವುದಿಲ್ಲ.

ರಾಜಕಾರನದ ಹಿನ್ನೆಲೆಯನ್ನೇ ತೆಗೆದುಕೊಂಡರೆ ದುರ್ಯೋಧನನು ಕೃಷ್ಣನ ರಾಯಭಾರದ ಹಿನ್ನೆಲೆಯಲ್ಲಿ ತಾನು ಯುದ್ದೋತ್ಸಾಹಿಯೇ ಆಗಿದ್ದೇನೆ ಎನ್ನುತ್ತಾ ಆಡುವ ಮಾತು ಆ ಸಂದರ್ಭದ ರಾಜಮಹಾರಾಜರ ಮನೋಭಾವಗಳನ್ನು ಹೇಳುವಂತಿದೆ. ದುರ್ಯೋಧನ ಹೇಳುವ ಮಾತು ಮಣಿದು ಬದುಕುವವನಲ್ಲ, ಹಗೆಯಲ್ಲಿ ಸೆಣಸದೇ ಬಿಡುವವನಲ್ಲ. ಧಾರಿಣಿಯ ಸಿರಿಗಳು ತುವವನಲ್ಲ, ಕೈದಣಿಯ ಹೊಯ್ಯಡುವೆನು, ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯಲ್ಲೆಂದ ಎಂಬುದು ದುರ್ಯೋಧನನ ಅಭಿಮತ. ರಾಜಮಹರಾಜರು ಧಾರಿಣಿಗೆ ಆಳುಪುವವರೇ ಆಗಿದ್ದರೂ ಅದು ಸಂಪೂರ್ಣ ದಕ್ಕುತ್ತದೆ ಎಂಬ ಆತ್ಮ ವಿಶ್ವಾಸ ಇರಲಿಲ್ಲ. ಆದ್ದರಿಂದ ಅವರಿಗೆಲ್ಲ ಉಳಿದಿರುವ ಒಂದೇ ಒಂದು ದಾರಿಯೆಂದರೆ ಕೈದಣಿಯುವಂತೆ ಹೊಯ್ದಾಡುವುದು. ಈ ಹೊಯ್ದಾಡುವುದರೊಂದಿಗೆ ಅವರಿಗೆ ಇರುವ ಇನ್ನೊಂದು ಗುಣವೆಂದರೆ ಮಣಿದು ಬದುಕದೇ ಇರುವುದು. ಅಷ್ಟೇ ಅಲ್ಲ ತನಗಿರುವ ಭೂಮಿಯಲ್ಲಿ ಅಂಗೈಯಗಲವನ್ನು ಇನ್ನೊಬ್ಬರಿಗೆ ನೀಡದೇ ಇರುವುದು. ಇದನ್ನೆಲ್ಲ ಹೇಳುತ್ತಲೇ ಅರಸರ ದುರಂತಗಳನ್ನು ನಾರಣಪ್ಪ ಅದೆಷ್ಟು ಸಮರ್ಥನಾಗಿ ಬಿಂಬಿಸುತ್ತಾನೆಂದರೆ ರಾಯಭಾರದ ಸಂದರ್ಭದಲ್ಲೆ ಇನ್ನೊಂದು ಘಟನೆಯನ್ನು ಸೃಷ್ಟಿಸುತ್ತಾನೆ.

ಹೀಗೆ ಹದಿನೈದನೇ ಶತಮಾನದಲ್ಲಿ ಭಾರತದಾದ್ಯಂತ ಎಷ್ಟೇ ಭಕ್ತಿಯ ಗಾಳಿ ಬೀಸುತ್ತಿದ್ದರೂ ಆಗಲೇ ಎರಡು ಪುಮುಖ ಯುದ್ಧರಳು ಜರುಗಿ ಹೋದವು. ದೇಶದ ರಾಜಕೀಯ ಮತ್ತು ಜಾತಿ ಹಿನ್ನೆಲೆಯ ಧರ್ಮಗಳು ತಮ್ಮ ಶೋಷಣೆಯನ್ನು ಮುಂದುವರಿಸಿಯೇ ಇದ್ದವು. ಇದರ ನಡುವೆಯೇ ದಾರ್ಶನಿಕರು. ಸಂತರು ಮೌನದಲ್ಲಿಯೇ ತಮ್ಮ ತತ್ವಗಳನ್ನು ಪ್ರಚಾರಪಡಿಸುತ್ತಿದ್ದರು. ಆದರೆ ಇದರ ಪ್ರಯೋಜನ ವ್ಯಾಪಕವಾಗಲಿಲ್ಲವಷ್ಟೆ. ಈ ಹೊತ್ತಿಗೂ ಸಮಾಜದಲ್ಲಿ ಉಳಿದಿರುವುದು ಅದೇ ಸ್ಥಿತಿ. ಸಾಂಸ್ಕೃತಿಕ ಸಂಗತಿಗಳೂ, ತತ್ವಗಳು ತೀರಿಕೆಯ ಮೇಲೆ ಉಳಿದುರುತ್ತವೆಯೇ ಹೊರತು ಅವು ಜನಸಾಮಾನ್ಯರ ನಡುವೆ ಅಧಿಕಾರಶಾಹಿಯ ಮಧ್ಯೆ ಚಾಲ್ತಿಗೆ ಬರುವುದು ಕಷ್ಟ. ಇದು ಯಾವೊತ್ತಿನ ಸಾಮಾಜಿಕ ಹಿನ್ನೆಲೆ. ಇದರಿಂದಲೇ ಭಕ್ತಿಯ ಗಾಳಿ ಭಾರತದದ್ಯಂತ ಬೀಸುತ್ತಿದ್ದ ಹದಿನೈದನೇ ಶತಮಾನದಲ್ಲೇ ಉತ್ತರದಲ್ಲಿ ಪಾಣಿಪಟಯುದ್ದವೂ ದಕ್ಷಿನದಲ್ಲಿ ವಿಜಯನಗರ ಯುದ್ಧವೂ ಜರುಗಿಹೋಯಿತು. ಅಲ್ಲಿಂದ ಭಾರತದಲ್ಲಿ ಮುಸ್ಲಿಂ ಸಂಸ್ಕೃತಿ ಪಸರಿಸತೊಡಗಿತು. ಈಗ ಅದು ಇತಿಹಾಸದ ಮಾತೇ ಆಗಿಹೋಗಿದೆ. ಮುಸ್ಲಿಮರು ಭಾರತ ನೆಲದಲ್ಲಿ ಒಂದಾಗಿ ನಂತರ ಎರಡೂ ಸಮೂಹ ಸೇರಿಕೊಂಡು ಬ್ರಿಟಿಷರನ್ನು ಎದುರಿಸತೊಡಗಿದರು. ಇಂಥ ಸಾಮಾಜಿಕ ವಾತಾವರಣದಲಿ ಭಾರತೀಯ ಸಾಹಿತ್ಯದ ಸ್ಥಿತಿಗತಿಗಳು ಬದಲಾಗತೊಡಗಿದವು. ಒಟ್ಟಿನಲ್ಲಿ ಹದಿನಾರು ಹದಿನೇಳನೇ ಶತಮಾನದ ನಂತರ ಕನ್ನದ ಸಾಹಿತ್ಯ ಪರಂಪರೆ ಅಂಥ ಮಹತ್ವದ್ದೇನಾಗಿರಲಿಲ್ಲ. ಉತ್ತರ ಕರ್ನಾಟಕದ ರಾಜ ವೈಭವಗಳೆಲ್ಲ ಮುಳುಗಿ ಪಾಳೆಯಗಾರರ ಆಳ್ವಿಕೆ ವಿಜಯನಗರದ ಪತನಾ ನಂತರ ಕರ್ನಾಟದ ತುಂಬೆಲ್ಲ ಉಂಟಾಗಿದ್ದಿತು. ಚಿಕ್ಕಮಗಳೂರು ಪ್ರದೇಶದಲ್ಲಿಯು ದೇವನೂರಿನ ಕವಿ ಲಕ್ಷ್ಮೀಶ, ಅಲ್ಲಿಂದ ಮೈಸೂರಿನ ಕಡೆ ಕವಿ ಷಡಕ್ಷರಿ , ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ ಇಂಥವರು ಬಿಟ್ಟರೆ, ಪಂಪ, ಕುಮಾರವ್ಯಾಸರಂಥ ಮಹಾಕವಿಗಳು ಹದಿನೇಳು, ಹದಿನೆಂಟನೇ ಶತಮಾನದಲ್ಲಿ ಇರಲಿಲ್ಲ. ಮುಸ್ಲಿಂ ಸಂಸ್ಕೃತಿ ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿ ಬೇರೂರಿನ ಫಲವಾಗಿ ಏನೋ ಸೂಫಿ ಸಂತರ ಪರಂಪರೆ ಹುಟ್ಟಿಕೊಂಡು ಅವರಲ್ಲಿ ಅತ್ಯಂತ ಪ್ರಮುಖನಾಗಿ ಶಿಶುನಾಳ ಷರೀಫ ಸಾಹೇಬ ಬರಲು ಸಾಧ್ಯವಾಯಿತು. ಇದೂ ಕೂಡ ಭಕ್ತಿ ಯುಗದ ಮುಂದುವರಿಕೆಯ ಫಲವೇ ಎಂದು ಭಾವಿಸಬೇಕಾಗಿದೆ. ಈ ಸಂಬಂಧದ ಸಂಶೋಧನೆ ಅಧ್ಯಯನ ಕನ್ನಡದಲ್ಲಿ ನಡೆಯಬೇಕಿದೆ.

**ಪರಾಮರ್ಶನ ಗ್ರಂಥಗಳು**

1. ಪ್ರಾಚೀನ ಕನ್ನದ ಸಾಹಿತ್ಯ ರೂಪಗಳು – ರಂ.ಶ್ರೀ. ಮುಗಳಿ
2. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ
3. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ – ತ.ಸು. ಶಾಮರಾಯ
4. ವಚನ ಸಾಹಿತ್ಯ – ಎಂ. ಚಿದಾನಂದಮೂರ್ತಿ
5. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ – ಸಿ. ವೀರಣ್ಣ, ಬೆಂಗಳೂರು.
6. ಸಾಹಿತ್ಯ ಮತ್ತು ರಾಜಕಾರಣ – ಬರಗೂರು ರಾಮಚಂದ್ರಪ್ಪ. ಬೆಂಗಳೂರು.
7. ಪ್ರಾಚೀನ ಕನ್ನದ ಸಾಹಿತ್ಯ – ಪ್ರಸಾರಾಂಗ, ಮೈವಿವಿ